2018 ಕ.ತೀ.ವ. 179

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಜಿ. ರಮೇಶ್

**ಶ್ರೀ ಅಶೋಕ -ವಿರುದ್ಧ- ಕರ್ನಾಟಕ ರಾಜ್ಯ, ಸಹಕಾರ ಇಲಾಖೆ ಮತ್ತು ಇತರರು***

ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ 64, 72 (1) ಮತ್ತು (2)ನೇ ಪ್ರಕರಣಗಳು.

ಅರ್ಜಿದಾರ-ಸಂಘದ ಪರಿಸಮಾಪನವನ್ನು ನಿರ್ದೇಶಿಸಿ ಮತ್ತು ಆ ಸಂಘದ ಪರಿಸಮಾಪನಕ್ಕಾಗಿ ಸಮಾಪಕನನ್ನು ನೇಮಿಸಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (ಸಂಕ್ಷಿಪ್ತವಾಗಿ 'ಅಧಿನಿಯಮ') 72(2)ನೇ ಪ್ರಕರಣದಡಿ ಹೊರಡಿಸಲಾದ ದಿನಾಂಕ 15.04.2015ರ ಆದೇಶವನ್ನು ದೃಢಪಡಿಸುವ ಮೂಲಕ ಸದರಿ ಅಧಿನಿಯಮದ 106(1)(ಜೆ) ಪ್ರಕರಣದಡಿ ಮಂಡಿಸಲಾದ ಅರ್ಜಿದಾರನ ಅಪೀಲನ್ನು ವಜಾಗೊಳಿಸಿ, ಅಪೀಲು ಪ್ರಾಧಿಕಾರದ ದಿನಾಂಕ 18.09.2015ರ ಆದೇಶವನ್ನು ಸಹಕಾರ ಸಂಘದ, ಎಂದರೆ, ಮೀನುಗಾರರ ಸರ್ವತೋಮುಖ ಅಭಿವೃದ್ಧಿ ಸಹಕಾರ ಸಂಘ ನಿಯಮಿತದ ('ಅರ್ಜಿದಾರ-ಸಂಘ') ಅಧ್ಯಕ್ಷರಾಗಿರುವ ಅರ್ಜಿದಾರರು ಪ್ರಶ್ನಿಸಿದ್ದಾರೆ.

ಅಧಿನಿಯಮದ 72ನೇ ಪ್ರಕರಣದ ಸರಳ ಓದಿನಿಂದ ಆ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳು ಪರಸ್ಪರ ಸ್ವತಂತ್ರವಾಗಿವೆಯೆಂಬುದು ಸ್ಪಷ್ಟವಾಗಿರುತ್ತದೆ. ಆದುದರಿಂದ, (2)ನೇ ಉಪ-ಪ್ರಕರಣದಲ್ಲಿ ಹೇಳಲಾದ ಅಗತ್ಯತೆಗಳನ್ನು ಪೂರೈಸಿದ ಪಕ್ಷದಲ್ಲಿ (2)ನೇ ಉಪಪ್ರಕರಣದಡಿ ಇರುವ ಅಧಿಕಾರವನ್ನು (1)ನೇ ಉಪಪ್ರಕರಣಕ್ಕಿಂತ

*ರಿಟ್ ಅರ್ಜಿ ಸಂ:205189/2015, ದಿನಾಂಕ: 1ನೇ ಅಕ್ಟೋಬರ್, 2015.

**ಪ್ರತ್ಯೇಕವಾಗಿ ಚಲಾಯಿಸಬಹುದು. ಹೀಗಾಗಿ, ಈ ಅಧಿನಿಯಮದ 72ನೇ ಪ್ರಕರಣದ (2)ನೇ ಉಪಪ್ರಕರಣದಡಿ ಇರುವ ಅಧಿಕಾರದ ಚಲಾವಣೆಯನ್ನು, ಈ ಅಧಿನಿಯಮದ 72ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ, ಸದರಿ ಅಧಿನಿಯಮದ 64ನೇ ಪ್ರಕರಣದಡಿ ವಿಚಾರಣೆ ಮಾಡುವುದರಿಂದ ಪ್ರಾರಂಭಿಸಬೇಕಾದ ಅಗತ್ಯವಿಲ್ಲ. ಅದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಅಧಿನಿಯಮದ 64ನೇ ಪ್ರಕರಣದಡಿಯಲ್ಲಿ ವಿಚಾರಣೆಯು, ಅಧಿನಿಯಮದ 72ನೇ ಪ್ರಕರಣದ (2)ನೇ ಉಪಪ್ರಕರಣದಡಿ ಇರುವ ಅಧಿಕಾರವನ್ನು ಚಲಾಯಿಸುವುದಕ್ಕೆ ಇರುವ ಪೂರ್ವ ಷರತ್ತೇನಲ್ಲ. ತದನುಸಾರವಾಗಿ, ಅರ್ಜಿದಾರರ ಪರ ವಕೀಲರು ಮಂಡಿಸಿದ ಏಕೈಕ ವಾದಾಂಶವನ್ನು ತಿರಸ್ಕರಿಸಲಾಗಿದೆ.**

**ಅಧಿನಿಯಮದ 72ನೇ ಪ್ರಕರಣದ (2)ನೇ ಉಪಪ್ರಕರಣದ ಯಾವುದೇ ಖಂಡದಡಿ ಅದರ ಅಗತ್ಯತೆಯನ್ನು ಪೂರೈಸಿದ ಪಕ್ಷದಲ್ಲಿ ರಿಜಿಸ್ಟ್ರಾರರು ಸಹಕಾರ ಸಂಘವನ್ನು ಪರಿಸಮಾಪನಗೊಳಿಸಲು ನಿರ್ದೇಶಿಸಿ, ತಾವಾಗಿಯೇ ಆದೇಶ ಮಾಡಬಹುದು ಎಂದು ಅಭಿಪ್ರಾಯಪಟ್ಟು ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.**

ಅರ್ಜಿದಾರರ ಪರ : ಜೆ. ಅಗುಸ್ಟಿನ್, ವಕೀಲರು

**ಆಜ್ಞೆ**

**ನ್ಯಾಯಮೂರ್ತಿ ಎಚ್.ಜಿ. ರಮೇಶ್(ಮೌಖಿಕ):**

1. ಅರ್ಜಿದಾರ–ಸಂಘದ ಪರಿಸಮಾಪನವನ್ನು ನಿರ್ದೇಶಿಸಿ ಮತ್ತು ಆ ಸಂಘದ ಪರಿಸಮಾಪನಕ್ಕಾಗಿ ಸಮಾಪಕನನ್ನು ನೇಮಿಸಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (ಸಂಕ್ಷಿಪ್ತವಾಗಿ 'ಅಧಿನಿಯಮ') 72(2)ನೇ ಪ್ರಕರಣದಡಿ ಹೊರಡಿಸಲಾದ ದಿನಾಂಕ 15.04.2015ರ ಆದೇಶವನ್ನು ದೃಢಪಡಿಸುವ ಮೂಲಕ ಸದರಿ ಅಧಿನಿಯಮದ 106(1)(ಜೆ) ಪ್ರಕರಣದಡಿ ಮಂಡಿಸಲಾದ ಅರ್ಜಿದಾರನ ಅಪೀಲನ್ನು ವಜಾಗೊಳಿಸಿ, ಅಪೀಲು ಪ್ರಾಧಿಕಾರದ ದಿನಾಂಕ 18.09.2015ರ ಆದೇಶವನ್ನು ಸಹಕಾರ ಸಂಘದ, ಎಂದರೆ, ಮೀನುಗಾರರ

ಸರ್ವತೋಮುಖ ಅಭಿವೃದ್ಧಿ ಸಹಕಾರ ಸಂಘ ನಿಯಮಿತದ ('ಅರ್ಜಿದಾರ-ಸಂಘ') ಅಧ್ಯಕ್ಷರಾಗಿರುವ ಅರ್ಜಿದಾರರು ಪ್ರಶ್ನಿಸಿದ್ದಾರೆ.

2. ನಾನು ಅರ್ಜಿದಾರರ ಪರ ಮಾನ್ಯ ವಕೀಲರ ವಾದವನ್ನು ಆಲಿಸಿದ್ದೇನೆ ಮತ್ತು ದಾಖಲೆಯನ್ನು ಪರಿಶೀಲಿಸಿದ್ದೇನೆ. ಅಧಿನಿಯಮದ 72(2)ನೇ ಪ್ರಕರಣದಡಿ ಹೊರಡಿಸಲಾದ, ದಿನಾಂಕ 15.04.2015ರ ಆದೇಶವು, ಅಧಿನಿಯಮದ 64ನೇ ಪ್ರಕರಣದಡಿ ನಡೆಸಲಾದ ವಿಚಾರಣೆಯಿಂದ ಮೊದಲಾಗಿಲ್ಲವೆಂದು, ಆದ್ದರಿಂದ, ಸದರಿ ಆದೇಶವು ಕಾನೂನಿನ ದೃಷ್ಟಿಯಲ್ಲಿ ಸಮರ್ಥನೀಯವಾಗಿಲ್ಲ ಎಂಬುದು ಮಾನ್ಯ ವಕೀಲರು ಮಂಡಿಸಿದ ಏಕೈಕ ವಾದಾಂಶವಾಗಿದೆ.

3. ಎತ್ತಲಾದ ವಾದಾಂಶವನ್ನು ಪರೀಕ್ಷಿಸಲು ಅಧಿನಿಯಮದ 72ನೇ ಪ್ರಕರಣವನ್ನು ಉಲ್ಲೇಖಿಸುವುದು ಸೂಕ್ತವಾಗಿದೆ:

> **72. ಸಹಕಾರ ಸಂಘಗಳ ಸಮಾಪನ:-** (1) ರಿಜಿಸ್ಟ್ರಾರನು, 64ನೇ ಪ್ರಕರಣದ ಮೇರೆಗೆ ವಿಚಾರಣೆ ನಡೆಸಿದ ಅಥವಾ 65ನೇ ಪ್ರಕರಣದ ಮೇರೆಗೆ ಪರಿಶೀಲನೆ ಮಾಡಿದ ತರುವಾಯ ಅಥವಾ ಸಹಕಾರ ಸಂಘದ ಸದಸ್ಯರ ಪೈಕಿ ನಾಲ್ಕನೇ ಮೂರು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಜನ ಸದಸ್ಯರು ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಆ ಸಂಘವನ್ನು ಸಮಾಪನಗೊಳಿಸಬೇಕೆಂದು ಅಭಿಪ್ರಾಯಪಡುವಲ್ಲಿ, ಅವನು ಅದನ್ನು ಸಮಾಪನಗೊಳಿಸಬೇಕೆಂದು ನಿರ್ದೇಶಿಸುವ ಆದೇಶವನ್ನು ಹೊರಡಿಸಬಹುದು.
>
> **(2) ರಿಜಿಸ್ಟ್ರಾರನು ತಾನಾಗಿಯೇ**
>
> [(ಎ) ಸಂಘದ ಸದಸ್ಯರ ಸಂಖ್ಯೆಯು ಒಂದು ಸಹಕಾರ ಸಂಘದ ನೋಂದಣಿಗೆ ಅಗತ್ಯವಿರುವ ಕನಿಷ್ಠ ಸಂಖ್ಯೆಗಿಂತ ಕಡಿಮೆಯಾಗಿರುವಲ್ಲಿ; ಅಥವಾ]

(ಬಿ) ಸಹಕಾರ ಸಂಘವು ಕಾರ್ಯವನ್ನು ಪ್ರಾರಂಭಿಸದಿರುವಲ್ಲಿ ಅಥವಾ ಕಾರ್ಯವನ್ನು ನಿಲ್ಲಿಸಿರುವಲ್ಲಿ; [ಅಥವಾ]

[(ಸಿ) ನೋಂದಣಿ ಮತ್ತು ವ್ಯವಸ್ಥಾಪನೆ ಬಗ್ಗೆ ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ವಿಧಿಸಿದ ಷರತ್ತುಗಳನ್ನು ಪಾಲಿಸುವುದನ್ನು ಸಹಕಾರ ಸಂಘವು ನಿಲ್ಲಿಸಿರುವಲ್ಲಿ – ಸಹಕಾರ ಸಂಘವನ್ನು ಸಮಾಪನಗೊಳಿಸುವಂತೆ ನಿರ್ದೇಶಿಸುವ ಆದೇಶವನ್ನು ಮಾಡಬಹುದು.

(3) ಸಹಕಾರ ಸಂಘದ ಅಸ್ತಿತ್ವವು ಮುಂದುವರಿಯತಕ್ಕುದೆಂದು ರಿಜಿಸ್ಟ್ರಾರನು ಅಭಿಪ್ರಾಯಪಟ್ಟಂಥ ಯಾವುದೇ ಸಂದರ್ಭದಲ್ಲಿ, ಯಾವುದೇ ಕಾಲಕ್ಕೆ ಆ ಸಂಘದ ಸಮಾಪನದ ಆದೇಶವನ್ನು ಅವನು ರದ್ದುಪಡಿಸಬಹುದು.

[(4) ಈ ಪ್ರಕರಣದಲ್ಲಿ ಏನೇ ಇದ್ದರೂ, ರಿಸರ್ವ್ ಬ್ಯಾಂಕ್‌ನ ಲಿಖಿತ ಪೂರ್ವ ಮಂಜೂರಾತಿಯನ್ನು ಪಡೆದ ಹೊರತು, ಯಾವುದೇ ಸಹಕಾರ ಬ್ಯಾಂಕನ್ನು ಸಮಾಪನಗೊಳಿಸತಕ್ಕುದಲ್ಲ [ಅಥವಾ ಸಮಾಪನಗೊಳಿಸುವ ಆದೇಶವನ್ನು ರದ್ದುಗೊಳಿಸತಕ್ಕುದಲ್ಲ.]]

(5) ಈ ಪ್ರಕರಣದಲ್ಲಿ ಏನೇ ಇದ್ದರೂ, ಸಹಕಾರ ಸಂಘದ ಸರ್ವಸದಸ್ಯರ ಸಭೆಯಲ್ಲಿ, ಹಾಜರಿರುವ ಸದಸ್ಯರ ಪೈಕಿ ಮೂರನೇ ಎರಡು ಭಾಗದಷ್ಟು ಸದಸ್ಯರು ಬಹುಮತದಿಂದ ಅಂಗೀಕರಿಸಿದ ನಿರ್ಣಯದಿಂದ ಮತ್ತು ಆ

> ಸಂಘದ ಪರಿಸಮಾಪನಕ್ಕಾಗಿ ಸಾಮಾನ್ಯ ಸಭೆಯಲ್ಲಿ ಬಹುಮತದಿಂದ ನಿರ್ಧಾರ ಕೈಗೊಂಡಲ್ಲಿ, ಸಹಕಾರ ಸಂಘವನ್ನು ಪರಿಸಮಾಪನಗೊಳಿಸಲು ರಿಜಿಸ್ಟ್ರಾರರು ಆದೇಶವನ್ನು ಮಾಡತಕ್ಕದ್ದು.
>
> (ಒತ್ತು ನೀಡಲಾಗಿದೆ)

4. ಮೇಲೆ ಉದ್ಧೃತಗೊಳಿಸಲಾದ, ಸದರಿ ಅಧಿನಿಯಮದ 72ನೇ ಪ್ರಕರಣದ ಸರಳ ಓದಿನಿಂದ ಆ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳು ಪರಸ್ಪರ ಸ್ವತಂತ್ರವಾಗಿವೆಯೆಂಬುದು ಸ್ಪಷ್ಟವಾಗಿರುತ್ತದೆ. ಆದುದರಿಂದ, (2)ನೇ ಉಪ-ಪ್ರಕರಣದಲ್ಲಿ ಹೇಳಲಾದ ಅಗತ್ಯತೆಗಳನ್ನು ಪೂರೈಸಿದ ಪಕ್ಷದಲ್ಲಿ (2)ನೇ ಉಪಪ್ರಕರಣದಡಿ ಇರುವ ಅಧಿಕಾರವನ್ನು (1)ನೇ ಉಪಪ್ರಕರಣಕ್ಕಿಂತ ಪ್ರತ್ಯೇಕವಾಗಿ ಚಲಾಯಿಸಬಹುದು. ಹೀಗಾಗಿ, ಈ ಅಧಿನಿಯಮದ 72ನೇ ಪ್ರಕರಣದ (2)ನೇ ಉಪಪ್ರಕರಣದಡಿ ಇರುವ ಅಧಿಕಾರದ ಚಲಾವಣೆಯನ್ನು, ಈ ಅಧಿನಿಯಮದ 72ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ, ಸದರಿ ಅಧಿನಿಯಮದ 64ನೇ ಪ್ರಕರಣದಡಿ ವಿಚಾರಣೆ ಮಾಡುವುದರಿಂದ ಪ್ರಾರಂಭಿಸಬೇಕಾದ ಅಗತ್ಯವಿಲ್ಲ. ಅದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಅಧಿನಿಯಮದ 64ನೇ ಪ್ರಕರಣದಡಿಯಲ್ಲಿ ವಿಚಾರಣೆಯು, ಅಧಿನಿಯಮದ 72ನೇ ಪ್ರಕರಣದ (2)ನೇ ಉಪಪ್ರಕರಣದಡಿ ಇರುವ ಅಧಿಕಾರವನ್ನು ಚಲಾಯಿಸುವುದಕ್ಕೆ ಇರುವ ಪೂರ್ವ ಷರತ್ತೇನಲ್ಲ. ತದನುಸಾರವಾಗಿ, ಅರ್ಜಿದಾರರ ಪರ ವಕೀಲರು ಮಂಡಿಸಿದ ಏಕೈಕ ವಾದಾಂಶವನ್ನು ತಿರಸ್ಕರಿಸಲಾಗಿದೆ.

5. ಅಧಿನಿಯಮದ 72ನೇ ಪ್ರಕರಣದ (2)ನೇ ಉಪಪ್ರಕರಣದ ಯಾವುದೇ ಖಂಡದಡಿ ಅದರ ಅಗತ್ಯತೆಯನ್ನು ಪೂರೈಸಿದ ಪಕ್ಷದಲ್ಲಿ ರಿಜಿಸ್ಟ್ರಾರರು ಸಹಕಾರ ಸಂಘವನ್ನು ಪರಿಸಮಾಪನಗೊಳಿಸಲು ನಿರ್ದೇಶಿಸಿ, ತಾವಾಗಿಯೇ ಆದೇಶ ಮಾಡಬಹುದು.

6. ಅರ್ಜಿದಾರ – ಸಂಘವನ್ನು ಪರಿಸಮಾಪನಗೊಳಿಸಲು ನಿರ್ದೇಶಿಸುವ, ದಿನಾಂಕ 15.04.2015ರ ಆದೇಶವನ್ನು, ಅರ್ಜಿದಾರ ಸಂಘಕ್ಕೆ ನೀಡಲಾದ, ದಿನಾಂಕ 18.03.2015ರ (ಅನುಬಂಧ–ಎ) ಕಾರಣ ತೋರಿಸುವ ನೋಟೀಸ್‌ನಿಂದ ಕಂಡುಬಂದಿರುವಂತೆ, ಸದರಿ ಅಧಿನಿಯಮದ 72ನೇ ಪ್ರಕರಣದ (2)ನೇ ಉಪಪ್ರಕರಣದ (ಸಿ) ಖಂಡದಡಿಯಲ್ಲಿ ಮಾಡಲಾಗಿದೆ. ಅರ್ಜಿದಾರ–ಸಂಘದ ಕಾರ್ಯನಿರ್ವಹಣೆಯಲ್ಲಿನ ಹದಿನಾಲ್ಕು ದೋಷಗಳನ್ನು ಸದರಿ ನೋಟೀಸಿನಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿದೆ. ಅರ್ಜಿದಾರ–ಸಂಘದ ಆಡಳಿತ ನಿರ್ವಹಣೆಯು ಅಧಿನಿಯಮದ ಉಪಬಂಧಗಳಿಗನುಸಾರ ವಾಗಿಲ್ಲವೆಂದು ಮೂಲ ಪ್ರಾಧಿಕಾರಕ್ಕೆ ಮತ್ತು ಅಪೀಲು ಪ್ರಾಧಿಕಾರಕ್ಕೆ ಸ್ಪಷ್ಟವಾಗಿದೆ. ಅರ್ಜಿದಾರ–ಸಂಘದಿಂದ ಸಲ್ಲಿಸಲಾದ ಉತ್ತರವೂ ಸೇರಿದಂತೆ, ಸಾಕ್ಷ್ಯದ ಆಧಾರದ ಮೇಲೆ ನಿರ್ಣಯಗಳನ್ನು ದಾಖಲಿಸಲಾಗಿದೆ. ಆದ್ದರಿಂದ, ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿ, ಈ ನ್ಯಾಯಾಲಯದ ಅಸಾಧಾರಣ ಅಧಿಕಾರ ವ್ಯಾಪ್ತಿಯ ಮೇರೆಗೆ ನ್ಯಾಯಿಕ ಪುನರವಲೋಕನದ ಅಧಿಕಾರವನ್ನು ಚಲಾಯಿಸಿ, ಅಪೀಲು ಪ್ರಾಧಿಕಾರದ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಆಧಾರವಿಲ್ಲವೆಂದು ನಾನು ನಿರ್ಣಯಿಸಿದ್ದೇನೆ. ತದನುಸಾರವಾಗಿ ರಿಟ್ ಅರ್ಜಿಯನ್ನು ವಜಾ ಮಾಡಲಾಗಿದೆ.

ಅರ್ಜಿಯು ವಜಾಗೊಂಡಿದೆ.

---